ಒಮ್ಮೆ ಹಾರ್ಟ್ ಎಂಬ ಯಕ್ಷಿಣಿಗಾರ ಕೇಸೀಯನ್ನು ಸುಪ್ತನಿದ್ರೆಗೆ ಒಳಪಡಿಸಿದ. ಆದರೆ ಅವನಿಗೆ ಆಶ್ಚರ್ಯವೇ ಕಾದಿತ್ತು. ಸುಪ್ತನಿದ್ರೆಯಲ್ಲಿರುವಾಗ ಕೇಸೀ ಮಾತಾಡಿದ. ಎಚ್ಚೆತ್ತ ಮೇಲೆ ಯಥಾಸ್ಥಿತಿಗೆ ಬಂದು ಮೂಕನಾದ. ಮುಂದೆ ಲೈನ್ ಎಂಬ 'ಅಸ್ಟಿಯೋಪಥಿ'ಜ್ಞ ಸಮ್ಮೋಹಿನಿ ವಿದ್ಯೆ ಬಳಸಿ ಕೇಸೀಯ ರೋಗವನ್ನು ನಿವಾರಿಸಿದ. ಕೇಸೀ ಸುಪ್ತಾವಸ್ಥೆಯಲ್ಲಿದ್ದಾಗ ಲೈನ್ ಸೂಚನೆ ನೀಡಿದಂತೆ ಮಾತಾಡಿದ. ದೈಹಿಕ ದೌರ್ಬಲ್ಯದಿಂದಾಗಿ ಕೇಸೀಯ ಧ್ವನಿತಂತುಗಳ ಸ್ನಾಯುಗಳು ತೀರಾ ಶಕ್ತಿಹೀನವಾಗಿದ್ದವು. ಆದ್ದರಿಂದ ಅವನಿಗೆ ಮಾತಾಡಲು ಸಾಧ್ಯವಾಗುತ್ತಿರಲಿಲ್ಲ. ಕೇಸೀ ಸುಪ್ತನಿದ್ರೆಯಲ್ಲಿದ್ದಾಗ ಮಾತನಾಡುತ್ತ, 'ತನ್ನ ತೊಂದರೆಗೊಳಗಾದ ದೇಹಭಾಗಕ್ಕೆ ರಕ್ತಪ್ರವಾಹ ಹೆಚ್ಚುವಂತೆ ಸೂಚನೆ ಕೊಡಿ' ಎಂದು ಹೇಳಿದ. ಅದರಂತೆ ಲೈನ್ ಸೂಚನೆಯನ್ನೂ ಕೊಟ್ಟ. ರಕ್ತವು ಕೇಸೀಯ ದೇಹದ ಮೇಲ್ಭಾಗಕ್ಕೆ ಪ್ರವಹಿಸತೊಡಗಿತು. ಈ ಪ್ರಯೋಗದಿಂದ ಕೇಸೀ ಮೊದಲಿನಂತೆ ಮಾತಾಡತೊಡಗಿದ.

ಕೇಸೀ ಸುಪ್ತನಿದ್ರೆಯಲ್ಲಿ ತನ್ನ ದೇಹವನ್ನು ತಾನೇ ಕಂಡು ಅದರ ಸ್ಥಿತಿಯನ್ನು ಸ್ಪಷ್ಟವಾಗಿ ಹೇಳಬಲ್ಲವನಾಗಿದ್ದರೆ, ಇತರರ ದೇಹಗಳ ಬಗ್ಗೆ ಕೂಡ ಹೇಳಬಹುದಲ್ಲ ಎಂಬ ವಿಚಾರ ಲೈನ್‌ಗೆ ಬಂತು. ತನ್ನ ದೇಹದ ರಚನೆಯ ಒಳಹೊಕ್ಕು, ತನಗಾಗುತ್ತಿರುವ ಬಾಧೆಗಳ ಬಗ್ಗೆ ತಿಳಿಸಲು ಅವನು ಕೇಳಿಕೊಂಡ. ಸುಪ್ತನಿದ್ರೆಯಲ್ಲಿದ್ದ ಕೇಸೀ, ಹಿಂದೆ ಯಾವ ವೈದ್ಯನೂ ಹೇಳಿರದ ಔಷಧಿ, ಆಹಾರ ಹಾಗೂ ಚಿಕಿತ್ಸಾವಿಧಾನವನ್ನು ಲೈನ್‌ಗೆ ವಿವರಿಸಿದನಂತೆ. ಅದನ್ನು ಅನುಸರಿಸಿದಾಗ ಲೈನ್‌ನ ಆರೋಗ್ಯ ಸುಧಾರಿಸಿತಂತೆ. ಈ ಘಟನೆಯಿಂದಾಗಿ ರೋಗ ನಿವಾರಣೆಯ ಬಗ್ಗೆ ಇರುವ ಕೇಸೀಯ ಅದ್ಭುತ ಶಕ್ತಿ ಬೆಳಕಿಗೆ ಬರುವಂತಾಯಿತು.

ಕೇಸೀಗೆ ವೈದ್ಯಕೀಯ ಶಾಸ್ತ್ರದ ಗಂಧಗಾಳಿ ಇಲ್ಲದಿದ್ದರೂ ಸುಪ್ತನಿದ್ರೆಯಲ್ಲಿದ್ದಾಗ ಆತ ವೈದ್ಯಕೀಯ ಭಾಷೆಯಲ್ಲೇ ಸುಲಲಿತವಾಗಿ ಮಾತಾಡುತ್ತಿದ್ದನಂತೆ. ಕೇಸೀ ೪೩ ವರ್ಷ ಕಾಲ ಅಸಂಖ್ಯ ಜನರಿಗೆ ತನ್ನ ಅತೀಂದ್ರಿಯ ಶಕ್ತಿಯ ನೆರವಿನಿಂದ ಸಲಹೆ ನೀಡಿದ. ಸುಮಾರು ೩೦ ಸಾವಿರ ಜನರಿಗೆ ಅವನು ನೀಡಿದ ಸಲಹೆಗಳನ್ನು ಸಂಗ್ರಹಿಸಿಡಲಾಗಿದೆ. ಗೀನಾ ಸೆರ್ಮಿನಾರಾ ಎಂಬ ಪ್ರಸಿದ್ಧ ಮನೋವಿಜ್ಞಾನಿಯೊಬ್ಬರು ಇವನ ಮೇಲೆ ಮೂರು ಪುಸ್ತಕ ಬರೆದಿದ್ದಾರೆ.

ಕೇಸೀಯ ಹಿಂದಿನ ಅಸ್ತಿತ್ವದ ಬಗ್ಗೆ ಸುಪ್ತಸ್ಥಿತಿಯಲ್ಲಿ ಪ್ರಶ್ನಿಸಲಾಯಿತು. ಹಿಂದೆ ಅವನು ಈಜಿಪ್ಟಿನಲ್ಲಿ ಧರ್ಮೋಪದೇಶಕನಾಗಿದ್ದನಂತೆ. ಆಗ ಕೆಲವೊಂದು ಸಿದ್ಧಿ ಪಡೆದಿದ್ದ. ಅವನು ಇನ್ನೊಂದು ಜನ್ಮದಲ್ಲಿ ವೈದ್ಯನಾಗಿದ್ದ. ಪುನರ್ಜನ್ಮವನ್ನು ಒಪ್ಪಿಕೊಂಡರೆ ಕ್ರೈಸ್ತ ಮತ್ತು ಅವನ ಉಪದೇಶವನ್ನು ಕಡೆಗಣಿಸಿದಂತಾಗುವುದಿಲ್ಲವೆ? ಈ ಪ್ರಶ್ನೆ ಕೇಸೀಯನ್ನು ಕಾಡಿತ್ತು. ಅವನಿಗೆ ಸಮಾಧಾನ ನೀಡಿದವನೇ ಮುದ್ರಣೋದ್ಯಮಿ ಆರ್ಥರ್ ಲ್ಯಾಮರ್ಸ್.

೧೯೨೩ರಲ್ಲಿ ಲ್ಯಾಮರ್ಸ್ ಕೇಸೀಯ ಶಕ್ತಿಯನ್ನು ಪರೀಕ್ಷಿಸಿದ. ಸುಪ್ತಾವಸ್ಥೆಯಲ್ಲಿದ್ದ ಕೇಸೀ ಲ್ಯಾಮರ್ಸನ ಜಾತಕವನ್ನೇ ಹೇಳಿದ. ಅವನಿಗೆ, 'ನೀನು ಹಿಂದೊಮ್ಮೆ ಸಂನ್ಯಾಸಿಯಾಗಿದ್ದೆ' ಎಂದಿದ್ದನಂತೆ. ಕ್ರಿಸ್ತನ ಉಪದೇಶಗಳಲ್ಲಿ ಪುನರ್ಜನ್ಮದ ವಿಚಾರ ಹುದುಗಿದೆಯೆಂದೂ, ಅನಂತರ ಬಂದ ಧರ್ಮಗುರುಗಳು ಆ ವಿಚಾರಕ್ಕೆ ಪ್ರಾಶಸ್ತ್ಯವನ್ನು ನೀಡಲಿಲ್ಲವೆಂದೂ ಅವನಿಗೆ ತಿಳಿಸಿದ. 'ಪುನರ್ಜನ್ಮವೆಂದರೆ ಒಂದು ದೃಷ್ಟಿಯಿಂದ ವಿಕಾಸ' ಎಂದೂ ಲ್ಯಾಮರ್ಸ್ ವಿವರಿಸಿದ. ಜೀವಿಯು ದೇಹವನ್ನು ಬದಲಾಯಿಸುತ್ತಾನೆ ಎಂಬ ಮಾತನ್ನು ಪಶ್ಚಿಮದ ಪ್ರತಿಭಾಶಾಲಿಗಳಾದ ಪ್ಲೇಟೊ, ಗಯಟೇ, ಎಮರ್ಸನ್, ವಾಲ್ಟ್ ವಿಟ್‌ಮನ್ ಮೊದಲಾದವರು ನಂಬಿದ್ದರೆಂದು ಹೇಳಿ ಅವನು ಕೇಸೀಯನ್ನು ಸಮಾಧಾನಪಡಿಸಿದ.


'ಈ ಯುಗದಲ್ಲಿ, ಎಂದರೆ ೧೯ ಮತ್ತು ೨೦ನೆಯ ಶತಮಾನಗಳಲ್ಲಿ ಕಾಣಿಸಿಕೊಂಡ ಅನೇಕ ಹಿರಿಯ ವಿಜ್ಞಾನಿಗಳು, ಕ್ರಿ.ಪೂ. ೯೫೦೦ ವರ್ಷಗಳ ಹಿಂದೆ, ಈಗ ಅಟ್ಲಾಂಟಿಕ್ ಸಾಗರ ಇರುವ ಪ್ರದೇಶದಲ್ಲಿದ್ದ ಪುರಾತನ ಭೂಖಂಡದಲ್ಲಿನ ಅತ್ಯುನ್ನತ ಸಂಸ್ಕೃತಿಯ ಕಾಲದಲ್ಲಿದ್ದು, ಈಗ ಪುನರ್ಜನ್ಮವೆತ್ತಿ ಬಂದವರು' ಎಂದು ಕೇಸೀ ಹೇಳುತ್ತಿದ್ದ.

'ಪಾಪ ಮತ್ತು ದುಃಖಗಳ ಕಾರ್ಯಕಾರಣ ತಿಳಿಸುವ ಪದವೇ ಕರ್ಮ' ಎಂದು ಕೇಸೀ ಹೇಳುತ್ತಿದ್ದ. ಅವನ ಹೇಳಿಕೆಯಲ್ಲಿ ಕರ್ಮ, ಕಾರ್ಮಿಕ ಮುಂತಾದ ಶಬ್ದಗಳು ಮತ್ತೆಮತ್ತೆ ಬರುತ್ತವೆ. ಹಿಂದಿನ ಜನ್ಮದಲ್ಲಿ ನಾವು ಮಾಡಿದ ಕೇಡು ಈ ಜನ್ಮದಲ್ಲಿ ನಮಗೆ ಅಹಿತವನ್ನು ಮಾಡುತ್ತದೆ. ಇದಕ್ಕೆ 'ಬೂಮರ್‍ಯಾಂಗ್ ಕರ್ಮ' ಎಂಬ ಶಬ್ದವನ್ನು ಕೇಸೀ ಬಳಸುತ್ತಾನೆ. ಇದಕ್ಕೆ ಸಂಬಂಧಿಸಿದಂತೆ ಅನೇಕ ಉದಾಹರಣೆಗಳನ್ನು ಕೇಸೀ ಕೊಡುತ್ತಾನೆ.

ಪರರ ನರಳಾಟವನ್ನು ಕಂಡೂ ಕಾಣದಂತೆ ನಟಿಸುವುದು ಕೂಡ ದೋಷ ಅಥವಾ ಅಪರಾಧ ಎಂದು ಕೇಸೀ ಹೇಳುತ್ತಾನೆ. ಮಾಡಬೇಕಾದ ಕಾರ್ಯ ಮಾಡದೆ ಇದ್ದುದರಿಂದ ಉಂಟಾದ ತಪ್ಪು, ಮಾಡಬಾರದ ಕೆಲಸ ಮಾಡಿದಾಗ ಉಂಟಾದ ತಪ್ಪುಗಳ ಬಗ್ಗೆ ಕೇಸೀ ಹೇಳುತ್ತಾನೆ. ಈ ಜನ್ಮದಲ್ಲಿ ಹುಟ್ಟುಕಿವುಡನಾಗಿರುವ ವ್ಯಕ್ತಿ ಹಿಂದಿನ ಜನ್ಮದಲ್ಲಿ ಸಹಾಯಕ್ಕಾಗಿ ಅಂಗಲಾಚಿದವರೊಡನೆ ಕಿವುಡನಂತೆ ವರ್ತಿಸಿದ್ದ. ತೀವ್ರ ಅಸ್ತಮಾದಿಂದ ಬಳಲುವ ವ್ಯಕ್ತಿ ಹಿಂದಿನ ಜನ್ಮದಲ್ಲಿ ಇನ್ನೊಬ್ಬರ ಬಾಳನ್ನು ಮೆಟ್ಟಿ ಬದುಕಿದ್ದ. ಹನ್ನೊಂದು ವರ್ಷದ ಮಗು ಹಾಸಿಗೆಯಲ್ಲಿ ಮೂತ್ರ ಮಾಡುತ್ತಿದ್ದ. ಅವನನ್ನು ಕೇಸೀಗೆ ತೋರಿಸಿದಾಗ, 'ಇವನು ಹಿಂದಿನ ಜನ್ಮದಲ್ಲಿ, ಪ್ಯೂರಿಟನ್ನರ ಕಾಲದಲ್ಲಿ, ಫ್ರಾನ್ಸಿನಲ್ಲಿ ಆಸ್ಥಾನ ಮಂತ್ರಿಯಾಗಿದ್ದ. ಶಿಕ್ಷೆಗೆ ಒಳಗಾದವರನ್ನು ಕೊಳವೊಂದಕ್ಕೆ ನೂಕಿ ಅವನು ಆನಂದಪಡುತ್ತಿದ್ದ. ಈ ಜನ್ಮದಲ್ಲಿ ತನ್ನ ಮೂತ್ರದ ಹೊಳೆಯಲ್ಲಿ ತಾನೇ ಬಿದ್ದುಕೊಳ್ಳುವ ಪರಿಸ್ಥಿತಿ ಬಂದಿದೆ' ಎಂದನಂತೆ. ಮುಂದೆ ಅದಕ್ಕೆ ಪರಿಹಾರವನ್ನೂ ಕೇಸೀ ಸೂಚಿಸಿದನಂತೆ. ಅದರಂತೆ ರಾತ್ರಿ ಮಲಗುವಾಗ ಹುಡುಗನ ಕಿವಿಯಲ್ಲಿ, 'ನೀನು ಒಳ್ಳೆಯವನು. ನೀನು ಎಂದಿಗೂ ಅಂತಹ ಅಸಹ್ಯ ತಪ್ಪುಗಳನ್ನು ಮಾಡಲಾರೆ. ನಿನ್ನ ಹಿರಿಯರು ನಿನ್ನಿಂದ ಒಳಿತನ್ನೇ ನಿರೀಕ್ಷಿಸುತ್ತಿದ್ದಾರೆ. ಅಜ್ಞಾನದಿಂದ ಉಂಟಾಗಿದ್ದ ದುಷ್ಕರ್ಮಕ್ಕಾಗಿ ನೀನು ನಿಜವಾಗಿಯೂ ಪಶ್ಚಾತ್ತಾಪಪಟ್ಟಿದ್ದೀ' ಎಂದು ಹೇಳಿದರಂತೆ. ಬಳಿಕ ವಾರಕ್ಕೊಮ್ಮೆ, ಅನಂತರ ತಿಂಗಳಿಗೊಮ್ಮೆ ಆ ಮಾತನ್ನು ಹೇಳುತ್ತಿದ್ದರಂತೆ. ಸ್ವಲ್ಪ ಕಾಲದಲ್ಲೇ ಹುಡುಗ ಆ ದುರಭ್ಯಾಸದಿಂದ ಪಾರಾದ.

ಗೀನಾ ಸೆರ್ಮಿನಾರಾ ಬರೆದ 'Many Mansions' ಎಂಬ ಗ್ರಂಥವನ್ನು, ಜನ್ಮಾಂತರ ಹಾಗೂ ಕರ್ಮದಲ್ಲಿ ವಿಶ್ವಾಸವಿಲ್ಲದವರು ತಪ್ಪದೇ ಓದಬೇಕು. ✻

# ಶ್ರೀಮದ್ಭಾಗವತ ಸಾರ



ಎ. ಮುರಳೀಧರ

## ದಶಮ ಸ್ಕಂಧ

### ಭಾಗ–೩

## ಗುರುಕುಲ ವಾಸ

ಕಂಸನ ಮರಣದ ಬಳಿಕ ಶ್ರೀಕೃಷ್ಣನು ತನ್ನ ತಾಯಿ ತಂದೆಯರಾದ ವಸುದೇವ ದೇವಕಿಯರನ್ನು ಮತ್ತು ಉಗ್ರಸೇನ ಮಹಾರಾಜನನ್ನು ಸೆರೆಮನೆಯಿಂದ ಬಿಡಿಸಿದನು. ಬಲರಾಮಕೃಷ್ಣರು ತಮ್ಮ ತಾಯಿತಂದೆಯರಿಗೆ ನಮಸ್ಕರಿಸಿದರು. ವಸುದೇವ ದೇವಕಿಯರು ಮಕ್ಕಳನ್ನು ತಬ್ಬಿಕೊಂಡು ಗಳಗಳನೆ ಅತ್ತರು. ನಂತರ ಯಾದವರು ಮತ್ತು ಕಂಸನ ದುರಾಡಳಿತಕ್ಕೆ ಒಳಗಾಗಿದ್ದ ಇತರರು ದೇಶದ ಯಾವುದೇ ಭಾಗದಲ್ಲಿ ನೆಮ್ಮದಿಯ ಜೀವನ ನಡೆಸಬಹುದೆಂದು ಕೃಷ್ಣನು ಸಂದೇಶವೊಂದನ್ನು ಕಳುಹಿಸಿದನು. ವಸುದೇವನು ಬಲರಾಮ ಕೃಷ್ಣರಿಗೆ ಕುಲಪುರೋಹಿತರಿಂದ ಉಪನಯನ ಮಾಡಿಸಿ, ವಿದ್ಯಾಭ್ಯಾಸದ ಸಲುವಾಗಿ ಅವರನ್ನು ಸಾಂದೀಪಿನಿ ಮುನಿಗಳ ಗುರುಕುಲಕ್ಕೆ ಕಳುಹಿಸಿದನು. ಅಲ್ಲಿ ಬಲರಾಮ ಕೃಷ್ಣರಿಬ್ಬರೂ ಗುರುವಿಗೂ ಗುರುಪತ್ನಿಗೂ ಅತ್ಯಂತ ವಿಧೇಯರಾಗಿದ್ದುಕೊಂಡು ವಿದ್ಯಾಭ್ಯಾಸ ಮಾಡಿದರು. ಗುರುಗಳು ಬಲರಾಮಕೃಷ್ಣರಿಗೆ ಅರುವತ್ತನಾಲ್ಕು ದಿನಗಳಲ್ಲಿ ಅರುವತ್ತನಾಲ್ಕು ವಿದ್ಯೆಗಳನ್ನು ಕಲಿಸಿಕೊಟ್ಟರು. ಆಗ ಸುದಾಮನೆಂಬ ಬಾಲಕ ಬ್ರಾಹ್ಮಣನು ಆಶ್ರಮಕ್ಕೆ ಬಂದು ಸೇರಿದನು. ಕೃಷ್ಣನು ಆತನೊಂದಿಗೆ ಆತ್ಮೀಯವಾಗಿ ಗೆಳೆತನ ಬೆಳೆಸಿದನು.

ವಿದ್ಯಾಭ್ಯಾಸದ ಕೊನೆಯಲ್ಲಿ ಬಲರಾಮಕೃಷ್ಣರು ಗುರುದಕ್ಷಿಣೆಯಾಗಿ ಏನು ನೀಡಬೇಕೆಂದು ಗುರುಗಳನ್ನು ಕೇಳಿದರು. ಅದಕ್ಕೆ ಅವರು, ಕೆಲವು ಕಾಲದ ಹಿಂದೆ ಪ್ರಭಾಸ ಕ್ಷೇತ್ರದ ಸಮುದ್ರದಲ್ಲಿ ಬಿದ್ದು ಗತಿಸಿದ ತಮ್ಮ ಪುತ್ರನನ್ನು ಕರೆತರಲು ಹೇಳಿದರು. ಆ ಕಾರ್ಯಕ್ಕಾಗಿ ಬಲರಾಮಕೃಷ್ಣರು ಬಾಲಕನು ಮರಣಹೊಂದಿದ್ದ ಸಮುದ್ರತೀರಕ್ಕೆ ಬಂದರು. ಅಲ್ಲಿನ ಸಮುದ್ರರಾಜನಲ್ಲಿ ವಿಚಾರಿಸಿದಾಗ ಅವನು ತನ್ನಲ್ಲಿ ಪಂಚಜನನೆಂಬ ದೈತ್ಯನಿದ್ದಾನೆ; ಅವನು ಈ ಬಾಲಕನನ್ನು ನುಂಗಿರಬಹುದೆಂಬ ಅನುಮಾನವನ್ನು ವ್ಯಕ್ತಪಡಿಸಿದನು. ಕೃಷ್ಣ ಬಲರಾಮರು ಪಂಚಜನನನ್ನು ಕೊಂದರೂ ಗುರುಪುತ್ರನು ಕಾಣಲಿಲ್ಲ. ಅವರು ಅಲ್ಲಿಂದ ನೇರವಾಗಿ ಯಮಪುರಿಗೆ ಬಂದರು. ಯಮನ ಅಧೀನದಲ್ಲಿದ್ದ ಗುರುಪುತ್ರನನ್ನು ತಮ್ಮೊಂದಿಗೆ ಕಳುಹಿಸಿಕೊಡಬೇಕೆಂದು ಅವರು ಬೇಡಿಕೊಂಡರು. ಯಮನು ಗುರುಪುತ್ರನನ್ನು ಕರೆತಂದು ಕೃಷ್ಣಬಲರಾಮರಿಗೆ ಒಪ್ಪಿಸಿದನು. ಅವರಿಬ್ಬರೂ ಗುರುಪುತ್ರನನ್ನು ಸಾಂದೀಪಿನಿ ಗುರುಗಳ ಬಳಿಗೆ ತಂದೊಪ್ಪಿಸಿದರು. ಗುರುಗಳಿಗೆ ಸಂತಸವಾಗಿ, 'ನೀವಿಬ್ಬರೂ ಕೀರ್ತಿವಂತರಾಗಿ ಜಗತ್ತನ್ನೇ ಬೆಳಗಿರಿ' ಎಂದು ಅವರು ಆಶೀರ್ವದಿಸಿದರು.

ಅನಂತರ ಕೃಷ್ಣನು ಗೋಪಾಲಕರ ಮತ್ತು ಗೋಪಿಕಾಸ್ತ್ರೀಯರ ಕ್ಷೇಮಸಮಾಚಾರವನ್ನು ತಿಳಿಯುವುದಕ್ಕಾಗಿ ಉದ್ಧವನನ್ನು ನಂದಗೋಕುಲಕ್ಕೆ ಕಳುಹಿಸಿದನು. ತಾನು ಅಲ್ಲಿ ಇಲ್ಲ ದಿದ್ದರೂ ಅವರ ಹೃದಯದಲ್ಲಿ ಮತ್ತು ಅವರ ನಾಮ ಸ್ಮರಣೆಯಲ್ಲಿ ಯಾವಾಗಲೂ ಇರುತ್ತೇನೆಂದು ಅವನು ಹೇಳಿ ಕಳುಹಿಸಿದನು. ಗೋಪಿಕಾಸ್ತ್ರೀಯರು ಮತ್ತು ಅಲ್ಲಿನ ಪ್ರಜೆಗಳು ಉದ್ಧವನನ್ನು ಕಂಡು, ಕೃಷ್ಣನೇ ಬಂದನೆಂದು ತಿಳಿದು ಉಪಚರಿಸಿದರು. ಅವರು ಅವನೊಂದಿಗೆ ತಮ್ಮ ವಿರಹವನ್ನೆಲ್ಲ ತೋಡಿಕೊಂಡರು; ಆತನಿಲ್ಲದ ಬದುಕಿನ ಬವಣೆಯನ್ನು ತಿಳಿಸಿದ ಅವರು ಅತ್ಯಂತ ದುಃಖಿತರಾದರು. ಉದ್ಧವನು ಅವರನ್ನೆಲ್ಲಾ ಸಂತೈಸಿದ ಬಳಿಕ ಒಂದು ಮಾಸ ಅಲ್ಲಿಯೇ ಇದ್ದು, ನಂದಗೋಪ ಮತ್ತು ಯಶೋದೆಯರ ಒಪ್ಪಿಗೆ ಪಡೆದು ಮಥುರಾಪಟ್ಟಣಕ್ಕೆ ಹಿಂತಿರುಗಿದನು.

ತ್ರೇತಾಯುಗದಲ್ಲಿ ದೇವತೆಗಳಿಗೆ ಯುದ್ಧದಲ್ಲಿ ಸಹಾಯ ಮಾಡಿದ ಮುಚುಕುಂದರಾಯನು ಯುದ್ಧದ ಬಳಲಿಕೆಯಿಂದ

ನಿದ್ದೆಯ ವರವನ್ನು ಪಡೆದಿದ್ದನು. ಯಾರು ತನ್ನನ್ನು ನಿದ್ದೆಯಿಂದ ಎಬ್ಬಿಸುವರೋ ಅವರು ಸುಟ್ಟು ಬೂದಿಯಾಗುವರೆಂಬುದೇ ಆ ವರ. ಅದರಂತೆ ಮುಚುಕುಂದರಾಯನು ತ್ರೇತಾಯುಗದಲ್ಲಿ ಮಲಗಿದ್ದವನು ದ್ವಾಪರಯುಗದ ತನಕವೂ ಮಲಗಿಯೇ ಇದ್ದನು. ಕಾಲನೇಮಿ ಎಂಬ ದೈತ್ಯನು ಶ್ರೀಕೃಷ್ಣನನ್ನು ಕೊಲ್ಲಲು ಅಟ್ಟಿಸಿಕೊಂಡು ಬಂದ ಸಂದರ್ಭದಲ್ಲಿ ಕೃಷ್ಣನು ಮುಚುಕುಂದರಾಯನು ಮಲಗಿದ್ದ ಗುಹೆಗೆ ಬಂದು ಅಡಗಿಕೊಂಡನು. ಅವನನ್ನು ಅಟ್ಟಿಸಿಕೊಂಡುಬಂದ ಕಾಲ ನೇಮಿ ದೈತ್ಯನು, ಮಲಗಿದ್ದ ಮುಚುಕುಂದರಾಯನನ್ನು ಕಾಲಿನಿಂದ ಒದ್ದನು. ಮುಚುಕುಂದನು ಕಣ್ಣು ತೆರೆದಕೂಡಲೇ ಕಾಲನೇಮಿ ದೈತ್ಯನು ಸುಟ್ಟು ಬೂದಿಯಾದನು. ನಂತರ ಶ್ರೀಕೃಷ್ಣನು ಮುಚುಕುಂದರಾಯನಿಗೆ ದರ್ಶನ ನೀಡಿದನು. ಮುಚುಕುಂದನ ಭಕ್ತಿಗೆ ಮೆಚ್ಚಿದ ಶ್ರೀಕೃಷ್ಣನು ಅವನಿಗೆ ನರನಾರಾಯಣರ ಆಶ್ರಮಕ್ಕೆ ತೆರಳಿ ತಪಸ್ಸನ್ನಾಚರಿಸುವಂತೆ ಸಲಹೆಯಿತ್ತನು.

**ಬಲರಾಮ ಮತ್ತು ರೇವತಿ :** ರೈವತನೆಂಬ ರಾಜನಿಗೆ ನೂರು ಜನ ಗಂಡುಮಕ್ಕಳು, ಒಬ್ಬಳೇ ಮಗಳು. ತನ್ನ ಮಗಳಿಗೆ ತಕ್ಕನಾದ ವರನನ್ನು ಹುಡುಕಲು ಭೂಮಂಡಲವನ್ನೆಲ್ಲಾ ಹುಡುಕಿದ, ಆದರೆ ಯಾವ ವರನೂ ಸಿಗದಿದ್ದಾಗ ಅವನು ಸತ್ಯಲೋಕಕ್ಕೆ ಹೋದನು. ಅಲ್ಲಿ ಗಾಯನ ಕಾರ್ಯಕ್ರಮ ನಡೆಯುತ್ತಿತ್ತು. ಗಾಯನ ಮುಗಿಯಲೆಂದು ತುಸು ಹೊತ್ತು ಕಾದನು. ಅದು ಮುಗಿದ ಮೇಲೆ ಬ್ರಹ್ಮನಲ್ಲಿಗೆ ಬಂದು, ನಮಸ್ಕರಿಸಿ ಬಂದ ವಿಷಯ ತಿಳಿಸಿದನು. ಅವನಿಗೆ ಬ್ರಹ್ಮನು, 'ಅಯ್ಯೋ ರಾಜ, ಸತ್ಯಲೋಕದಲ್ಲಿ ಒಂದು ಗಳಿಗೆಯ ಸಮಯವು ಭೂಲೋಕದಲ್ಲಿ ಯುಗಗಳೇ ಕಳೆದಿರುತ್ತದೆ. ನಿನ್ನ ದೇಶದಲ್ಲಿದ್ದಾಗ ನಿನ್ನ ಕಾಲದ ಜನರಾಗಲಿ ಯಾರೂ ಇಲ್ಲವಾದ್ದರಿಂದ ಈಗ ಭೂಲೋಕದಲ್ಲಿ ದ್ವಾಪರಯುಗವು ನಡೆಯುತ್ತಿದೆ. ಆದಿಶೇಷನ ಅವತಾರವಾದ ಬಲರಾಮನು ನಿನ್ನ ಮಗಳ ಗಂಡನಾಗಲು ಯೋಗ್ಯನಾಗಿದ್ದಾನೆ' ಎಂದು ಹೇಳಿ ಕಳುಹಿಸಿದನು.

ಅದರಂತೆ ರೈವತನು ದ್ವಾರಕಾಪಟ್ಟಣಕ್ಕೆ ಬಂದು, ವಸುದೇವ ದೇವಕಿಯರಿಗೆ ನಡೆದ ವಿಷಯವನ್ನು ತಿಳಿಸಿದನು. ರೇವತಿಯು ಬಲರಾಮನಿಗಿಂತ ಆಕಾರದಲ್ಲಿ, ವಯಸ್ಸಿನಲ್ಲಿ ಹಿರಿಯಳಾಗಿದ್ದು, ಎತ್ತರವಾಗಿದ್ದಳು. ಬಲರಾಮನು ಅವಳಿಗೆ ತಾನು ಸಮವಾಗುವಂತೆ ಅವಳ ಹೆಗಲನ್ನು ನೇಗಿಲಿನಿಂದ ಒತ್ತಿ, ಅವಳ ಎತ್ತರವನ್ನು ಕುಗ್ಗಿಸಿದನು. ಹೀಗೆ ದ್ವಾಪರಯುಗಕ್ಕೆ ತಕ್ಕಂತೆ ರೇವತಿಯ ರೂಪ, ಎತ್ತರ, ವಯಸ್ಸು, ಬದಲಾಯಿತು. ರೈವತ ರಾಜನು ಮಗಳನ್ನು ಬಲರಾಮನಿಗೆ ಕೊಟ್ಟು ವಿವಾಹ ಮಾಡಿ, ಬದರಿಕಾಶ್ರಮಕ್ಕೆ ತೆರಳಿದನು. ಅಲ್ಲಿ ಅವನು ತಪಸ್ಸನ್ನು ಆಚರಿಸಿ ತನ್ನ ಜನ್ಮವನ್ನು ಸಾರ್ಥಕ ಮಾಡಿಕೊಂಡನು.

**ರುಕ್ಮಿಣಿ :** ಭೀಷ್ಮಕ ಎಂಬ ರಾಜನು ವಿದರ್ಭದೇಶವನ್ನು ಆಳುತ್ತಿದ್ದನು. ಇವನಿಗೆ ಐದು ಮಂದಿ ಗಂಡುಮಕ್ಕಳು ಮತ್ತು ಕೊನೆಯವಳು ರುಕ್ಮಿಣಿ. ಹಿರಿಯ ಮಗ ರುಕ್ಮಿ; ಅವನು ಶ್ರೀಕೃಷ್ಣನ ದ್ವೇಷಿಯಾಗಿದ್ದು, ಶಿಶುಪಾಲನೊಂದಿಗೆ ಸ್ನೇಹದಿಂದಿದ್ದನು. ರುಕ್ಮಿಯು ಮಹಾಪರಾಕ್ರಮಿ ಮತ್ತು ಪ್ರಬುದ್ಧನಾಗಿದ್ದನು. ರುಕ್ಮಿಯು ತನ್ನ ತಂಗಿಯಾದ ರುಕ್ಮಿಣಿಯನ್ನು ತನ್ನ ಸ್ನೇಹಿತನಾದ ಶಿಶುಪಾಲನಿಗೆ ಕೊಡಬೇಕೆಂದು ತಂದೆ–ತಾಯಿಯರನ್ನು ಬಲವಂತವಾಗಿ ಒಪ್ಪಿಸಿದ್ದನು.

ರುಕ್ಮಿಣಿಯು ಬಹಳ ದಿನಗಳಿಂದ ದೇಶವಿದೇಶಗಳಿಂದ ಬರುತ್ತಿದ್ದ ಯಾತ್ರಿಕರಿಂದಲೂ, ಬ್ರಾಹ್ಮಣರಿಂದಲೂ ಕೃಷ್ಣನ ಗುಣಗಾನವನ್ನು ಕೇಳಿ ಅವನಿಗೆ ಮನಸೋತಿದ್ದಳು. ಅವನನ್ನೇ ವಿವಾಹವಾಗಲು ಬಯಸಿ, ತನ್ನ ಬಯಕೆಯನ್ನು ತಂದೆ–ತಾಯಿಗಳಿಗೆ ಹೇಳಿದಳು. ತಂದೆತಾಯಿಗಳಿಗೆ ಮಗಳ ಆಸೆಯನ್ನು ಪೂರೈಸಬೇಕೆಂಬ ಇಚ್ಛೆಯಿದ್ದರೂ ರುಕ್ಮಿಯ ಭಯದಿಂದ ಅವರು ಹತಾಶರಾಗಿದ್ದರು. ಇತ್ತ ರುಕ್ಮಿಯು ಶಿಶುಪಾಲನೊಂದಿಗೆ ಮದುವೆಯ ದಿನವನ್ನು ಗೊತ್ತು ಮಾಡಿದನು. ರುಕ್ಮಿಣಿಗೆ ಸಂಕಟವಾಯಿತು. ಯುಕ್ತಿಯಿಂದ ತನ್ನ ಗುರುಗಳಾದ ಬ್ರಾಹ್ಮಣನೊಬ್ಬನ ಮೂಲಕ ಶ್ರೀಕೃಷ್ಣನಿಗೆ ಪ್ರೇಮಪತ್ರವನ್ನು ಬರೆದು ಕಳುಹಿಸಿದಳು. ಅದರಲ್ಲಿ ವಿವಾಹದ ಹಿಂದಿನ ದಿನ ತಾನು ಅಂಬಿಕಾದೇವಿಯ ದರ್ಶನಕ್ಕೆ ಹೋಗುವುದಾಗಿಯೂ, ತನ್ನನ್ನು ಅಲ್ಲಿಂದ ಕರೆದುಕೊಂಡು ಹೋಗಿ ಮದುವೆಯಾಗಬೇಕೆಂದೂ ಅವಳು ಶ್ರೀಕೃಷ್ಣನನ್ನು ವಿನಂತಿಸಿಕೊಂಡಿದ್ದಳು.

ವೃದ್ಧ ಬ್ರಾಹ್ಮಣನು ದ್ವಾರಕಾಪುರಿಗೆ ಬಂದು ಕೃಷ್ಣನನ್ನು ಕಂಡು, ರುಕ್ಮಿಣಿಯ ಪತ್ರವನ್ನು ಅವನಿಗೆ ಕೊಟ್ಟನು. ಕೃಷ್ಣನು ಬ್ರಾಹ್ಮಣನನ್ನು ಸತ್ಕರಿಸಿ ಉಪಚರಿಸಿದನು. ಅನಂತರ ಅವನು ರುಕ್ಮಿಣಿಯ ಪತ್ರವನ್ನು ಓದಿದನು. ಆ ವಿಪ್ರೋತ್ತಮನನ್ನು ಕರೆದುಕೊಂಡು ವಿದರ್ಭದೇಶಕ್ಕೆ ಬಂದ ಶ್ರೀಕೃಷ್ಣನು ಬ್ರಾಹ್ಮಣನನ್ನು ರುಕ್ಮಿಣಿಯ ಬಳಿಗೆ ಕಳುಹಿಸಿ,



ರುಕ್ಮಿಣಿಗೆ ಧೈರ್ಯ ಹೇಳುವಂತೆಯೂ, ಅವಳನ್ನು ತಾನು ಕರೆದೊಯ್ಯುವುದಾಗಿಯೂ ಅಭಯವನ್ನು ನೀಡಿದನು. ರುಕ್ಮಿಣಿಯು ಲಕ್ಷ್ಮಿಯ ಅವತಾರವಾಗಿದ್ದುದರಿಂದ ಸಹಜವಾಗಿಯೇ ಕೃಷ್ಣನ ಮೇಲಿನ ಪ್ರೇಮ ಅವಳಿಗೆ ಕ್ಷಣ ಕ್ಷಣಕ್ಕೂ ಹೆಚ್ಚಾಗುತ್ತಿತ್ತು. ಅವಳು ಬ್ರಾಹ್ಮಣನ ಬರವಿಗಾಗಿ ಚಡಪಡಿಸಿದಳು. ಕೊನೆಗೆ ಬ್ರಾಹ್ಮಣನು ಬಂದು ವಿಷಯವನ್ನು ತಿಳಿಸಿದಾಗ ರುಕ್ಮಿಣಿ ಸಂತಸಗೊಂಡು ಶ್ರೀಕೃಷ್ಣನೊಂದಿಗೆ ಹೋಗಲು ಸಿದ್ಧಳಾದಳು.

ದೇವಾಲಯಕ್ಕೆ ಬಂದ ರುಕ್ಮಿಣಿಯ ಸೌಂದರ್ಯ ಹಾಗೂ ಮೋಹಕತೆಗೆ ಬೆರಗಾದ ಸೈನಿಕರೆಲ್ಲರೂ ಸಂಮೋಹನಕ್ಕೆ ಒಳಗಾದರು. ಅವರೆಲ್ಲರ ಎದುರಿಗೆ ಶ್ರೀಕೃಷ್ಣನು ರುಕ್ಮಿಣಿಯನ್ನು ತನ್ನ ರಥದಲ್ಲಿ ಕೂರಿಸಿಕೊಂಡು ಪರಾರಿಯಾದನು. ಶ್ರೀಕೃಷ್ಣನನ್ನು ಬೆನ್ನಟ್ಟಿದ ರುಕ್ಮಿಯು ಶ್ರೀಕೃಷ್ಣನೊಂದಿಗೆ ಯುದ್ಧದಲ್ಲಿ ಪರಾಭವಗೊಂಡನು. ಈ ಅಪಮಾನದಿಂದಾಗಿ ರುಕ್ಮಿಯು ತನ್ನ ರಾಜಧಾನಿಗೆ ಹಿಂತಿರುಗಲಿಲ್ಲ. ಅವನು ಭೋಜಕಟಕ ಪಟ್ಟಣಕ್ಕೆ ಹೋಗಿ ಶ್ರೀಕೃಷ್ಣನನ್ನು ದ್ವೇಷಿಸುತ್ತಲೇ ಮರಣ ಹೊಂದಿದನು.

**ನರಕಾಸುರ ವಧೆ :** ನರಕಾಸುರನು ಮಹಾಶೂರನಾಗಿದ್ದು, ದೇವತೆಗಳನ್ನೂ ಭೂಲೋಕದ ರಾಜರನ್ನೂ ನಡುಗಿಸುತ್ತಾ ನಿರಂಕುಶನಾಗಿದ್ದನು. ದೇಶವಿದೇಶಗಳ ಹದಿನಾರು ಸಾವಿರಕ್ಕೂ ಹೆಚ್ಚು ರಾಜಕನ್ಯೆಯರನ್ನು ಸೆರೆಯಲ್ಲಿಟ್ಟು, ಆ ರಾಜ್ಯದ ರಾಜರುಗಳನ್ನು ತನ್ನ ಅಂಕೆಯಲ್ಲಿಟ್ಟುಕೊಂಡಿದ್ದನು. ಇವರ ಉಪಟಳವನ್ನು ತಡೆಯಲಾಗದೆ ದೇವೇಂದ್ರನು ಕೃಷ್ಣನ ಮೊರೆ ಹೊಕ್ಕನು. ಶ್ರೀಕೃಷ್ಣನು ನರಕಾಸುರನ ವಧೆಗಾಗಿ ಅವನ ರಾಜಧಾನಿಗೆ ಬಂದನು. ಆತನ ಅರಮನೆಯ ಸುತ್ತ ಇರುವ ಕೋಟೆಯನ್ನು ಉರುಳಿಸಿ, ಮಯಾಸುರನೆಂಬ ಐದು ತಲೆಯ ರಾಕ್ಷಸನನ್ನು ಸಂಹರಿಸಿದನು. ನಂತರ ನರಕಾಸುರನನ್ನು ಸಂಹರಿಸಿ, ಸೆರೆಯಲ್ಲಿದ್ದ ರಾಜಕನ್ಯೆಯರನ್ನು ಬಿಡಿಸಿದನು. ಆ ರಾಜಕನ್ಯೆಯರ ಇಚ್ಛೆಯಂತೆ ಅವರನ್ನು ಶ್ರೀಕೃಷ್ಣನು ಮದುವೆಯಾದನು.

**ಪಾಂಡವರ ಮಿತ್ರ :** ಹಸ್ತಿನಾಪುರದಲ್ಲಿ ಧರ್ಮಿಷ್ಠರಾದ ಪಾಂಡವರಿಗೆ ಧೃತರಾಷ್ಟ್ರನು ಮಾಡುತ್ತಿದ್ದ ಅನ್ಯಾಯಗಳನ್ನು ಕೇಳಿ ಶ್ರೀಕೃಷ್ಣನು ಆಕ್ರೋಶಗೊಂಡಿದ್ದನು. ಧರ್ಮರಾಯನು ತನ್ನ ಪಾಲಿಗೆ ದೊರಕಿದ ಇಂದ್ರಪ್ರಸ್ಥವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ರಾಜಭಾರ ಮಾಡುತ್ತಿದ್ದನು. ಶ್ರೀಕೃಷ್ಣನು ಅವನಿಂದ ರಾಜಸೂಯಯಾಗವನ್ನು ಮಾಡಿಸಿದನು. ರಾಜಸೂಯಯಾಗವನ್ನು ಮಾಡುವುದೆಂದರೆ, ರಾಜನ ಸಂಬಂಧಿಕರು ಮತ್ತು ಸ್ನೇಹಿತರು ಬಿಟ್ಟು ಉಳಿದೆಲ್ಲ ರಾಜರೂ ಅವನ ವಶದಲ್ಲಿರಬೇಕಿರಬೇಕೆಂಬುದೇ ನಿಯಮ. ಇದಕ್ಕೆ ಜರಾಸಂಧನು ಅಡ್ಡಿಯಾಗಿದ್ದನು. ಜರಾಸಂಧನೊಬ್ಬನನ್ನು ಸೋಲಿಸಿದರೆ, ಆತನ ಕೈಕೆಳಗಿನ ಎಲ್ಲ ರಾಜರೂ ಧರ್ಮರಾಜನಿಗೆ ಶರಣಾಗತರಾಗುತ್ತಿದ್ದರು. ಆದ್ದರಿಂದ ಧರ್ಮರಾಯನ ಅಪ್ಪಣೆ ಪಡೆದು, ಶ್ರೀಕೃಷ್ಣನು ಭೀಮಾರ್ಜುನರನ್ನು ಕರೆದುಕೊಂಡು ಜರಾಸಂಧನ ಅರಮನೆಯನ್ನು ಬ್ರಾಹ್ಮಣ ವೇಷದಲ್ಲಿ ಪ್ರವೇಶಿಸಿದನು. ಜರಾಸಂಧನು ಶ್ರೀಕೃಷ್ಣನ್ನು ಮುಗಿಸಲು ಹಲವಾರು ಬಾರಿ ಯುದ್ಧ ಮಾಡಿದ್ದನು. ಅವನು ನರಕಾಸುರನಂತೆಯೇ ಇಪ್ಪತ್ತು ಸಾವಿರ ರಾಜಕುಮಾರರನ್ನು ಬಂಧಿಸಿ, ತನ್ನ ಮಗಧ ಸಾಮ್ರಾಜ್ಯದ ಸೆರೆಯಲ್ಲಿಟ್ಟಿದ್ದನು. ಬ್ರಾಹ್ಮಣನ ವೇಷದಲ್ಲಿ ಬಂದ ಶ್ರೀಕೃಷ್ಣನು ಜರಾಸಂಧನನ್ನು ಕುರಿತು, "ನಿನ್ನಲ್ಲಿ ನಾವು ಮಲ್ಲಯುದ್ಧವನ್ನು ಬಯಸಿ ಬಂದಿದ್ದೇವೆ. ನಾವು ಮೂವರಲ್ಲಿ ಯಾರಾದರೂ ಒಬ್ಬರನ್ನು ನೀನು ಯುದ್ಧಕ್ಕೆ ಆಯ್ದುಕೋ. ನಾನೇ ಕೃಷ್ಣ; ಉಳಿದವರಿಬ್ಬರು ಭೀಮಾರ್ಜುನರು" ಎಂದನು.



ಜರಾಸಂಧನು ನಸುನಕ್ಕು, "ಕೃಷ್ಣ, ನಾನು ನಿನ್ನೊಡನೆ ಯುದ್ಧವನ್ನು ಬಯಸಿ ಬಂದಾಗ ನೀನು ಹೇಡಿಯಂತೆ ಓಡಿಹೋದವನು. ನಿನ್ನೊಂದಿಗೆ ನಾನು ಸೆಣಸಲಾರೆ. ಇನ್ನು ಅರ್ಜುನಾದರೋ, ಬಾಲಕನಂತಿದ್ದಾನೆ. ಭೀಮನಾದರೆ ನನಗೆ ಸಮಬಲನು. ನಾನು ಅವನೊಂದಿಗೇ ಸೆಣಸುವೆ" ಎಂದನು. ಮಲ್ಲಯುದ್ಧದಲ್ಲಿ ಭೀಮನು ಜರಾಸಂಧನನ್ನು ಎರಡಾಗಿ ಸೀಳಿದನು. ಆ ಬಳಿಕ ಶ್ರೀಕೃಷ್ಣನು ಇಪ್ಪತ್ತು ಸಾವಿರ ರಾಜಕುಮಾರರನ್ನು ಬಂಧನದಿಂದ ಬಿಡಿಸಿ, ಧರ್ಮರಾಯನಿಂದ ರಾಜಸೂಯಯಾಗವನ್ನು ವೈಭವದಿಂದ ಮಾಡಿಸಿದನು.

ರಾಜಸೂಯಯಾಗ ಮುಕ್ತಾಯವಾದ ನಂತರ ಮಹಾತ್ಮರನ್ನು ಪೂಜಿಸಿ, ಆದರಿಸಿ, ದಾನ ಧರ್ಮ ಮಾಡುವುದು ಯಜ್ಞದ ಪರಂಪರೆಯಾಗಿತ್ತು. ಆದರೆ ಮೊದಲು ಯಾರನ್ನು ಪೂಜಿಸಬೇಕೆಂದು ತಿಳಿಯದೆ ಧರ್ಮರಾಯನು ಚಿಂತಿಸುತ್ತಿದ್ದನು. ಪಂಡಿತೋತ್ತಮನಾದ ಸಹದೇವನು, ಶ್ರೀಕೃಷ್ಣನೇ ಅದಕ್ಕೆ ಯೋಗ್ಯನೆಂದು ಹೇಳಿದನು. ಅದೇ ಸರಿಯೆಂದು ತೀರ್ಮಾನಿಸಿ, ಧರ್ಮರಾಯನು ದ್ರೌಪದಿಯೊಂದಿಗೆ ಕೃಷ್ಣನ ಪಾದವನ್ನು ತೊಳೆದು ಆ ನೀರನ್ನು ತಾನೂ ಪ್ರೋಕ್ಷಿಸಿಕೊಂಡನು; ಎಲ್ಲ ಕಡೆಗೂ ಪ್ರೋಕ್ಷಿಸಿದನು.